

# ಅಧ್ಯಾಯ ೧೪
# ಚಲನೆಯಲ್ಲಿ ಸಾಮರಸ್ಯ

0680CH14

ಭಾರತವು ಸಾಂಪ್ರದಾಯಿಕ ನೃತ್ಯಗಳ ಶ್ರೀಮಂತ ಪಟ್ಟಿಯನ್ನು ಹೊಂದಿದೆ, ಪ್ರತಿಯೊಂದೂ ದೇಶದ ವೈವಿಧ್ಯಮಯ ಸಾಂಸ್ಕೃತಿಕ ಪರಂಪರೆಯಲ್ಲಿ ಆಳವಾಗಿ ಬೇರೂರಿದೆ. ಈ ನೃತ್ಯಗಳು ಕೇವಲ ಚಲನೆಯ ಅಭಿವ್ಯಕ್ತಿಯಷ್ಟೆಯಲ್ಲ, ಅದರೊಂದಿಗೆ ಕಥೆಗಳು, ಭಾವನೆಗಳು ಮತ್ತು ಆಧ್ಯಾತ್ಮಿಕತೆಯನ್ನು ಸಹ ತಿಳಿಸುತ್ತವೆ.

ಸಾಂಪ್ರದಾಯಿಕ ನೃತ್ಯವು, ಶಾಸ್ತ್ರೀಯ ನೃತ್ಯ ಅಥವಾ ಲೋಕ ನೃತ್ಯವಾಗಿರಬಹುದು. ನಮ್ಮ ಸಂಸ್ಕೃತಿಯಲ್ಲಿನ ವೈವಿಧ್ಯಮಯ ನೃತ್ಯವು ಪ್ರಕೃತಿಯಲ್ಲಿರುವ ವಿಶಿಷ್ಟವಾದ ವಿಭಿನ್ನ ಸುಗಂಧಗಳನ್ನು ಹರಡುತ್ತದೆ.

ನಮ್ಮಲ್ಲಿ ಹಲವಾರು ವಾದ್ಯಗಳು, ಪರಿಕರಗಳು, ವೇಷಭೂಷಣಗಳು, ಭಾಷೆಗಳು ಮತ್ತು ಸಾಂಸ್ಕೃತಿಕ ನಂಬಿಕೆಗಳಿವೆ, ಅವುಗಳನ್ನು ಹಲವಾರು ಗುಂಪುಗಳ ಜನರು ಪ್ರದರ್ಶಿಸುತ್ತಾರೆ. ಅಂತಹ ಸಾಂಪ್ರದಾಯಿಕ ನೃತ್ಯಗಳು ನಮ್ಮ ರಾಷ್ಟ್ರವನ್ನು ಮೇಲಕ್ಕೆತ್ತುತ್ತವೆ ಮತ್ತು ಸಾಮಾಜಿಕ ಮತ್ತು ನೈತಿಕ ಸಮಗ್ರತೆಯನ್ನು ಬಲಪಡಿಸುತ್ತವೆ.

ಈಗ, ನಮ್ಮ ಶ್ರೀಮಂತ ಸಾಂಸ್ಕೃತಿಕ ಪರಂಪರೆಯ ನೃತ್ಯವನ್ನು ಸಂರಕ್ಷಿಸುವುದು ಅಥವಾ ಜೀವಂತವಾಗಿಡುವುದು ಮತ್ತು ರಕ್ಷಿಸುವುದು ನಿಮ್ಮ ಜವಾಬ್ದಾರಿಯಾಗಿದೆ.

## ಚಟುವಟಿಕೆ ೧: ನಮ್ಮ ಸಾಂಪ್ರದಾಯಿಕ ನೃತ್ಯ

ನಿಮ್ಮ ಸ್ಥಳೀಯ ಪ್ರದೇಶದ/ಭಾಗದ ಯಾವುದೇ ಸಾಂಪ್ರದಾಯಿಕ ನೃತ್ಯ ಮತ್ತು ಅದಕ್ಕೆ ಸಂಬಂಧಿಸಿದ ಹಾಡನ್ನು ಆರಿಸಿ.

ನಿಮ್ಮ ಸ್ಥಳೀಯ ಪ್ರದೇಶದಲ್ಲಿ ಬಳಸುವ ವಾದ್ಯಗಳೊಂದಿಗೆ ಲಯಬದ್ಧವಾಗಿ ನೃತ್ಯ ಮಾಡಿ.



ಬಿಹು

© NCERT not to be republished



ಗುಜರಾತ್‌ನ ಸಿದಿ ಧಮಾಲ್ ನೃತ್ಯ

**ಉದಾಹರಣೆ ೧:** ಅಸ್ಸಾಂನ ನೃತ್ಯವಾದ ಬಿಹು ಢೋಲ್ ಎಂಬ ವಾದ್ಯವನ್ನು ಮತ್ತು ಎಮ್ಮೆಯ ಕೊಂಬುಗಳಿಂದ ತಯಾರಿಸಿದ ಪೆಪಾ ಎಂದು ಕರೆಯಲಾಗುವ ವಿಶಿಷ್ಟವಾದ ಗಾಳಿ ವಾದ್ಯವನ್ನು ಬಳಸಲಾಗುತ್ತದೆ.

**ಉದಾಹರಣೆ ೨:** ಸಿದಿ ಧಮಾಲ್ ನೃತ್ಯವು ಗುಜರಾತಿನದ್ದಾಗಿದೆ. ಇದರ ಪ್ರದರ್ಶನದ ಸಮಯದಲ್ಲಿ ದೊಡ್ಡ ಡ್ರಮ್‌ಗಳನ್ನು ವಾದ್ಯಗಳಾಗಿ ಬಳಸಲಾಗುತ್ತದೆ.

ನೀವು ಪ್ರದರ್ಶನ ನೀಡಲು ಸಿದ್ಧರಿದ್ದೀರಾ? ಒಂದು ಕ್ಷಣ ಕಾಯಿರಿ. ನಿಮ್ಮ ನೃತ್ಯದಲ್ಲಿ ನೀವು ಯಾವ ಪರಿಕರಗಳನ್ನು (ಮಡಕೆಗಳು, ಕೋಲುಗಳು, ಉಂಗುರಗಳು ...) ಬಳಸುತ್ತೀರಿ ಎಂದು ನೀವು ಚರ್ಚಿಸಿದ್ದೀರಾ?

ನೀವು ಪ್ರದರ್ಶಿಸಲಿರುವ ನಿರ್ದಿಷ್ಟ ನೃತ್ಯದಲ್ಲಿ ಬಳಸುವ ವೇಷಭೂಷಣಗಳ ಬಗ್ಗೆ ನಿಮಗೆ ತಿಳಿದಿದೆಯೇ?

ಭಾರತದ ಎಲ್ಲಾ ನೃತ್ಯಗಳು ನಮ್ಮ ಸಾಂಸ್ಕೃತಿಕ ಪರಂಪರೆಯಲ್ಲಿ ಬೇರೂರಿವೆ. ನೃತ್ಯವು ಚಲನೆ, ಲಯ, ಸಂಗೀತವನ್ನು ಮಾತ್ರವಲ್ಲದೆ ವೇಷಭೂಷಣ, ಪರಿಕರಗಳು, ಪ್ರಸಾಧನ ಮತ್ತು ವೇದಿಕೆಯ ಸ್ಥಾನವನ್ನು ಸಹ ಒಳಗೊಂಡಿರುತ್ತದೆ.

## ಚಟುವಟಿಕೆ ೨: ನೃತ್ಯಕ್ಕೆ ಬೇಕಾಗಿರುವ ಆಭರಣಗಳು ಮತ್ತು ಪರಿಕರಗಳ ತಯಾರಿಕೆ

ನಿಮ್ಮ ನೃತ್ಯಕ್ಕೆ ಬೇಕಾಗಿರುವ ಅಗತ್ಯವಾದ ವೇಷಭೂಷಣಗಳ ಬಗ್ಗೆ ನಿಮ್ಮ ಗುಂಪುಗಳೊಂದಿಗೆ ಚರ್ಚಿಸಿ. ಕಾರ್ಡ್‌ಬೋರ್ಡ್, ಬಣ್ಣದ ಕಾಗದ, ಅಲಂಕಾರಿಕ ರಿಬ್ಬನ್‌ಗಳು ಇತ್ಯಾದಿಗಳನ್ನು ಬಳಸಿ ಅವುಗಳನ್ನು ನೀವೇ ತಯಾರಿಸಲು ಪ್ರಯತ್ನಿಸಿ.
**ಉದಾಹರಣೆ:** ನೃತ್ಯ ಆಭರಣಗಳು ಅಂದರೆ ಹಾರ, ತಲೆಗವಸು, ಹನುಮಾನ್ ಫೇಸ್ ಮಾಸ್ಕ ಮತ್ತು ರಾಣಿಯ ಕಿರೀಟ ಇತ್ಯಾದಿ.



ಕಿವಿಯೋಲೆಗಳು



ಕೊರಳ/ಕಂಠಹಾರ



ತಲೆಗವಸು



ಗೆಜ್ಜೆ

© NCERT not to be republished

## ಚಟುವಟಿಕೆ ೪: ನಿಮ್ಮ ಆಯ್ಕೆಯ ಆಭರಣ ಅಥವಾ ಪರಿಕರಗಳನ್ನು ಚಿತ್ರಿಸಿ.

© NCERT
not to be republished

ಕಾಗದ, ಕಾರ್ಡ್‌ಬೋರ್ಡ್, ಬಟ್ಟೆ ಇತ್ಯಾದಿಗಳನ್ನು ಬಳಸಿಕೊಂಡು ಅವುಗಳನ್ನು ತಯಾರಿಸಲು ಪ್ರಯತ್ನಿಸಿ.



ಬಲೆಯೊಂದಿಗೆ-(net) ನೃತ್ಯ ಮಾಡುತ್ತಿರುವುದು



ಸಂಗೀತಗಾರರು ಸಂಗೀತ ಕಾರ್ಯಕ್ರಮಕ್ಕಾಗಿ ಕುಳಿತುಕೊಂಡಿರುವುದು

## ಚಟುವಟಿಕೆ ೪: ಪ್ರದರ್ಶನ ಸ್ಥಳದ ಜ್ಞಾನ

ತರಗತಿಯಲ್ಲಿ ಈ ಕೆಳಗಿನವುಗಳನ್ನು ಚರ್ಚಿಸಿ:

- ಪ್ರದರ್ಶನಕ್ಕೆ ಅಡೆತಡೆಯಾಗದಂತೆ ವೇದಿಕೆಯ ಮೇಲೆ ಅಗತ್ಯವಾದ ಪರಿಕರಗಳನ್ನು ಇಡುವುದು.
- ನೃತ್ಯ ಮಾಡುತಿರುವಾಗ ಆರಾಮದಾಯಕವೆಂದು ಭಾವಿಸುವ (ಕೈ ಮತ್ತು ಕಾಲುಗಳನ್ನು ಎತ್ತುವುದು, ಜಿಗಿಯುವುದು, ತಿರುಗಿಸುವುದು, ಇತ್ಯಾದಿ) ವೇಷಭೂಷಣಗಳನ್ನು ವಿನ್ಯಾಸಗೊಳಿಸುವುದು.
- ವೇದಿಕೆಯಿಂದ ಎರಡು ಬದಿಗಳ ಮೂಲಕ ಪ್ರವೇಶ ಮತ್ತು ನಿರ್ಗಮನ. (ರಂಗಭೂಮಿ ವಿಭಾಗದಲ್ಲಿ ವೇದಿಕೆಯ ರಚನೆಯನ್ನು ನೋಡಿ.)

ಪ್ರತಿಯೊಂದು ನೃತ್ಯ ಪ್ರಕಾರಗಳು ವಿಭಿನ್ನ ರಂಗಪರಿಕರಗಳು ಮತ್ತು ವೇದಿಕೆ ಅಲಂಕಾರಗಳನ್ನು ಹೊಂದಿವೆ. ನೃತ್ಯದ ಪ್ರತಿಯೊಂದು ಅಂಶವೂ ಎಲ್ಲರಿಗೂ ಸ್ಪಷ್ಟವಾಗುತ್ತ ಎಂದು ಭಾವಿಸೋಣ.

ಇಲ್ಲಿಯವರೆಗೆ, ನೀವು ಸಣ್ಣ ಗುಂಪುಗಳಲ್ಲಿ ಕೆಲಸ ಮಾಡಿದ್ದೀರಿ. ಮುಂದೆ, ನೀವು ತರಗತಿಯ ಎಲ್ಲಾ ಸದಸ್ಯರನ್ನು ಒಳಗೊಂಡ ಸಾಮೂಹಿಕ ಗುಂಪಾಗಿ ಕೆಲಸ ಮಾಡುತ್ತೀರಿ.

ಈಗ, ನೀವು ಹೊಸ ವಿಷಯಗಳನ್ನು ಅನ್ವೇಷಿಸಲಿದ್ದೀರಿ!

### ನೃತ್ಯ ನಾಟಕ (ನಾಟ್ಯ)

ನಾವು 'ನೃತ್ಯ' ಎಂಬ ಪದ ಮಾತ್ರವಲ್ಲದೆ 'ನಾಟಕ' ಎಂಬ ಪದವೂ ತಿಳಿದುಕೊಂಡಿವೆ'.

ನಾವು ನೃತ್ಯ ಮತ್ತು ನಾಟಕ ಎರಡನ್ನೂ ಒಗ್ಗೂಡಿಸಿದರೆ ಅದು ಕೆಲಸ ಮಾಡುತ್ತದೆಯೇ?

ನೃತ್ಯ ನಾಟಕ ಅಥವಾ ನಾಟ್ಯವು ಸೃಜನಶೀಲ ಅಭಿವ್ಯಕ್ತಿಯ ಒಂದು ರೂಪವಾಗಿದ್ದು, ಇದರಲ್ಲಿ ಭಾಗವಹಿಸುವವರು ನೃತ್ಯವನ್ನು ಕಥೆಯನ್ನು ಹೇಳಲು ಅಥವಾ ಹೆಜ್ಜೆಗಳು, ದೇಹ ಮತ್ತು ಹಸ್ತಮುದ್ರೆಗಳನ್ನು ಸಾಧನವಾಗಿ ಬಳಸಿಕೊಂಡು ಸಂದೇಶವನ್ನು ತಿಳಿಸುತ್ತಾರೆ, ಜೊತೆಗೆ ಹಾಡುಗಳು ಮತ್ತು ಸಂಗೀತಕ್ಕೆ ನಟಿಸುತ್ತಾರೆ.



© NCERT not to be republished

ನೃತ್ಯ ನಾಟಕದ ಪ್ರದರ್ಶನದಲ್ಲಿ, ಪ್ರದರ್ಶಕರ ನಡುವೆ -ಹೊಂದಾಣಿಕೆ, ಅಭಿವ್ಯಕ್ತಿ ಮತ್ತು ಸಹಯೋಗದ ಅಗತ್ಯವಿರುತ್ತದೆ.

**ಹೊಂದಾಣಿಕೆ/ಸಮನ್ವಯ**



**ಅಭಿವ್ಯಕ್ತಿ**



**ಪ್ರದರ್ಶಕರ ನಡುವಿನ ಸಹಯೋಗ**



ನೃತ್ಯ ನಾಟಕವು ಚಲನೆ ಮತ್ತು ನಟನೆಯ ಕಲೆಯ ಮೂಲಕ ನಿರೂಪಣೆಯನ್ನು ತರುತ್ತದೆ. ನೃತ್ಯ ನಾಟಕಗಳು ವಿವಿಧ ವಿಷಯವಸ್ತುಗಳು-(themes), ಸಾಂಸ್ಕೃತಿಕ ಅಥವಾ ಐತಿಹಾಸಿಕ ಘಟನೆಗಳಿಂದ ಸ್ಫೂರ್ತಿ ಪಡೆದುಕೊಂಡು, ಕಲಾತ್ಮಕ ಅನ್ವೇಷಣೆಗೆ ಶ್ರೀಮಂತ ಮತ್ತು ವೈವಿಧ್ಯಮಯ ವೇದಿಕೆಯನ್ನು ಒದಗಿಸುತ್ತದೆ.

## ಚಟುವಟಿಕೆ ೫: ಪ್ರಕೃತಿಯ ಕಥೆಯನ್ನು ಹಂಚಿಕೊಳ್ಳುವುದು

ಸಮಾಜಕ್ಕೆ ನೈತಿಕ ಮೌಲ್ಯವನ್ನು ನೀಡುವಂಥಹ, ಪ್ರಕೃತಿ ಅಥವಾ ಪರಿಸರ ಅಥವಾ ಸ್ವಾತಂತ್ರ್ಯ ಚಳವಳಿಗೆ ಸಂಬಂಧಿಸಿದ ಕಥೆಯನ್ನು ಹುಡುಕಿ ಹಾಗೂ ಚರ್ಚಿಸಿ.

**ಉದಾಹರಣೆಗಳು**

ಇದಕ್ಕೆ ಸಂಬಂಧಿಸಿದ ಕಥೆಗಳು-

- ಪ್ಲಾಸ್ಟಿಕ್ ಬಳಕೆಯನ್ನು ತಪ್ಪಿಸುವುದು.
- ಜಲಮೂಲಗಳನ್ನು ಉಳಿಸುವುದು.
- ಮೊಬೈಲ್ ಫೋನಿನ ಅತಿಯಾದ ಬಳಕೆ.
- ಸಾವಯವ ಕೃಷಿ.
- ಶಿಕ್ಷಣದಲ್ಲಿ ಸಮಾನತೆ.

**ಸೂಚನೆ:** ಇಂಗ್ಲಿಷ್ ಅಥವಾ ಇತರ ಯಾವುದೇ ಭಾಷೆಯ ಪಠ್ಯಪುಸ್ತಕದಿಂದ ಕಥೆಯನ್ನು ಆರಿಸಿ.

ನಿಮ್ಮ ಸುತ್ತಮುತ್ತಲಿನ ಪರಿಸ್ಥಿತಿ ಮತ್ತು ಪ್ರದೇಶದೊಂದಿಗೆ ಸಂಬಂಧಿಸಿರಬಹುದಾದ ಸೂಕ್ತವಾದ ಕಥೆಯನ್ನು ಆಯ್ಕೆ ಮಾಡಿ ಮತ್ತು ತರಗತಿಯಲ್ಲಿ ಹಂಚಿಕೊಳ್ಳಿ.

ಪಠ್ಯ-(Script) ಎಂಬುದು ನಾಟ್ಯ, ನೃತ್ಯ ನಾಟಕದ ಪ್ರದರ್ಶನ ಅಥವಾ ಪ್ರಸ್ತುತಿಗಾಗಿ ಸಂಭಾಷಣೆಗಳು, ಹಾಡುಗಳು, ಕ್ರಿಯೆ ಮತ್ತು ನಿರ್ದೇಶನವನ್ನು ಒಳಗೊಂಡಿರುವ ಲಿಖಿತ ದಾಖಲೆಯಾಗಿದೆ. ನೃತ್ಯದಲ್ಲಿ, ಸಂಭಾಷಣೆಯು ಹೆಚ್ಚಾಗಿ ಹಸ್ತಮುದ್ರಗಳ ಮೂಲಕ ನಡೆಯುತ್ತದೆಯಾದರೂ ಪದಗಳನ್ನು ಸಹ ಬಳಸಬಹುದು.

ಯೋಚಿಸಿ ...

ಚರ್ಚಿಸಿ ...

ಬರೆಯಿರಿ ...

ಆಯ್ದ ಕಥೆ ಅಥವಾ ಕವಿತೆಯಿಂದ ಒಂದು ಪಠ್ಯವನ್ನು ಬರೆಯಲು ಪ್ರಯತ್ನಿಸಿ ಮತ್ತು ಒಂದು ನಾಟ್ಯವನ್ನು ರಚಿಸಲು ಪರಸ್ಪರ ಆಲೋಚನೆಗಳನ್ನು ಹಂಚಿಕೊಳ್ಳಿ.

ಪಠ್ಯವನ್ನು ಬರೆಯುವಾಗ, ಸಂಭಾಷಣೆಗಳನ್ನು ಹಸ್ತಮುದ್ರಗಳು, ಪಾತ್ರಗಳು, ವೇಷಭೂಷಣಗಳು, ರಂಗಪರಿಕರಗಳು ಮತ್ತು ವೇದಿಕೆಯ ಅವಶ್ಯಕತೆಗಳೊಂದಿಗಿನ  ಬಗ್ಗೆ ಯೋಚಿಸಿ.

ಈ ಚಟುವಟಿಕೆಯಲ್ಲಿ, ನೀವು ಕಥೆಯ ಎಲ್ಲಾ ಪಾತ್ರಗಳಿಗೆ ಜೀವ ನೀಡುತ್ತಿದ್ದೀರಿ.

ನಾಟ್ಯ ಪ್ರದರ್ಶನಕ್ಕಾಗಿ ಹಸ್ತಮುದ್ರೆಗಳು, ಕೈ ಮತ್ತು ದೇಹದ ಚಲನೆಗಳ ಅಭ್ಯಾಸ ಮಾಡಿ.

ಲಯ, ಹೆಜ್ಜೆಗಳು, ಚಲನೆಗಳು, ಹಸ್ತಮುದ್ರಗಳು, ಭಂಗಿಗಳ ಅಂಶಗಳನ್ನು ಕವಿತೆ ಮತ್ತು ಅಭ್ಯಾಸದಲ್ಲಿ ಸಂಕಲಿಸಿ.

ಅಲ್ಲದೆ, ನಾಟ್ಯದಲ್ಲಿ ಸೇರಿಸಲಾಗಿರುವ ಬೋಲ್ಗಳು ಅಥವಾ ಕೊಲುಕೆಟ್ಟುಸ್ (ಉದಾಹರಣೆಗೆ, ಥ ಕ ಧಿ ಮಿ) ಮತ್ತು ಸರಗಮ್‌ಗಳನ್ನು (ಸಾಮಾನ್ಯವಾಗಿ ಸಂಗೀತ ತರಗತಿಯಲ್ಲಿ ಕಲಿತ) ಬಳಸಿಕೊಂಡು ಲಯಬದ್ಧ ಮಾದರಿಗಳೊಂದಿಗಿನ ನೃತ್ಯವನ್ನು ಗುರುತಿಸಿ.

ನಾಟ್ಯದಲ್ಲಿ ಪ್ರಮುಖ ಅಂಶವಾಗಿರುವ ಮುಖಭಾವಗಳನ್ನು ಅಭ್ಯಾಸ ಮಾಡಿ. ನಿಮ್ಮ ನಾಟ್ಯದ ವ್ಯವಸ್ಥಿತ ಫಲಿತಾಂಶಕ್ಕಾಗಿ ನೀವೆಲ್ಲರೂ ಒಗ್ಗಟ್ಟಿನಿಂದ ಕೆಲಸ ಮಾಡಬೇಕು.

© NCERT not to be republished



## ಚಟುವಟಿಕೆ ೬: ನಾಟ್ಯ ಸಂಯೋಜನೆ ಮತ್ತು ಪ್ರದರ್ಶನ

ಒಂದು ತಂಡವಾಗಿ ಕೆಲಸ ಮಾಡುವ ಮೂಲಕ ಸಂಭಾಷಣೆಗಳು, ಲಯಬದ್ಧ ಸಂಗೀತ, ನೃತ್ಯದ ಬಡಿತಗಳು ಮತ್ತು ಚಲನೆಗಳನ್ನು ಒಳಗೊಂಡಿರುವ ನಾಟ್ಯ/ನೃತ್ಯ ನಾಟಕವನ್ನು ಸಂಯೋಜನೆ ಮಾಡಿ.



ನಾಟ್ಯ ಸಂಯೋಜನೆಯ ಈ ಹಂತದಲ್ಲಿ, ನಾವು ಪರಿಕರಗಳು, ವೇಷಭೂಷಣಗಳು, ಆಭರಣಗಳು, ವೇದಿಕೆ ಅಲಂಕಾರ ಮತ್ತು ಇತ್ಯಾದಿಗಳನ್ನು ನೋಡಬೇಕಾಗಿದೆ.

ಪ್ರದರ್ಶನದಲ್ಲಿ ನೀವು ಪರಿಕಗಳನ್ನು ಆರಾಮವಾಗಿ ನಿಭಾಯಿಸಲು, ಮುಖ್ಯ ಪ್ರದರ್ಶನ ನೀಡುವುದಕ್ಕಿಂತ ಮುಂಚಿತವಾಗಿಯೇ ಪರಿಕರಗಳೊಂದಿಗೆ ಅಭ್ಯಾಸ ಮಾಡಿ.

ಒಮ್ಮೆ ನೃತ್ಯ ಸಂಯೋಜನೆ ಮುಗಿಯಿತು ಅಂದರೆ, ನಂತರ ಕೇವಲ ಅಭ್ಯಾಸ ಮಾಡುವದು ಇರುತ್ತದೆ.

ಅಭ್ಯಾಸ! ಅಭ್ಯಾಸ! ಅಭ್ಯಾಸ!-(ಪ್ರ್ಯಾಕ್ಟೀಸ್)

ಯಶಸ್ಸಿನ ಪ್ರಮುಖ ಅಂಶವೆಂದರೆ ಅಭ್ಯಾಸ ..

ನಾಟ್ಯ ಅಭ್ಯಾಸದ ನಂತರ, ಈಗ ರಂಗದ ಮೇಲೆ ಪೂರ್ವಾಭ್ಯಾಸ/ತಾಲೀಮು ಮಾಡುವ ಸಮಯ.

ಒಳ್ಳೆಯದು, ತುಂಬಾ ಚನ್ನಾಗಿತು!

ನಿಮ್ಮ ನಾಟ್ಯವನ್ನು ನಿಮ್ಮ ತರಗತಿಯ ಮುಂದೆ ಅಥವಾ ಬಹು ಪ್ರೇಕ್ಷಕರ ಮುಂದೆ ಪ್ರದರ್ಶಿಸಿ.